ತೆರಿಗೆಗಳಿಂದ ಬಂದಿರುವ ಆದಾಯದ ವಿವರ ಈ ಕೆಳಗಿನಂತಿದೆ.

ಅಧಿನಿಯಮ	(ರೂ. ಕೋಟಿಗಳಲ್ಲಿ)
ಮಾರಾಟ ತೆರಿಗೆ	3913.91
ಮನರಂಜನಾ ತೆರಿಗೆ	47.66
ಪ್ರವೇಶ ತೆರಿಗೆ	244.84
ಕೃಷಿ ವರಮಾನ ತೆರಿಗೆ	31.73
ವೈಭವ ತೆರಿಗೆ	46.32
ವೃತ್ತಿ ತೆರಿಗೆ	101.01
ಜೂಜು ತೆರಿಗೆ	12.19
ಬಿಎಮ್ಆರ್ಟಿಎಸ್ ಸೆಸ್	33.97
ಒಟ್ಟು	**4431.63**

ಆ) ಸೋರಿ ಹೋಗುತ್ತಿರುವ ಆದಾಯವೆಷ್ಟು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಇ) ಅ) ಗುಪ್ತ ವಾರ್ತೆ ಮತ್ತು ಜಾಗೃತಿ ವಿಭಾಗಗಳ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ.

ಆ) ಕರನಿರ್ಧರಣಾ ಕಛೇರಿಗಳ ಹಾಗೂ ಶೋಧನಾ ಠಾಣೆಗಳ ಗಣಕೀಕರಣ ಮಾಡಲಾಗುತ್ತಿದೆ.

ರಾಜ್ಯದಲ್ಲಿ ನ್ಯಾಯಾಧೀಶರ ಹುದ್ದೆ ಭರ್ತಿ

838 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಉಳಿದ ಬಾಕಿ ಪ್ರಕರಣಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಬಾಕಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅವಶ್ಯವಿರುವ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು?

ಇ) ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು?

ಈ) ಖಾಲಿ ಇರುವ ನ್ಯಾಯಾಧೀಶರುಗಳ ಹುದ್ದೆಗಳನ್ನು ತುಂಬಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಅನುಬಂಧದಲ್ಲಿ ನೀಡಿದೆ.

ಆ) ಪ್ರಕರಣಗಳ ಸ್ವರೂಪ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲರ ಸಹಕಾರದ ಮೇಲೆ ಪ್ರಕರಣಗಳು ಇತ್ಯರ್ಥ ಪಡಿಸಲಾಗುತ್ತದೆ. ಆದ್ದರಿಂದ ಅವಶ್ಯ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು ಎಂದು ತಿಳಿಸಲು ಸಾಧ್ಯವಿರುವುದಿಲ್ಲ.

ಇ) ಜಿಲ್ಲಾ ನ್ಯಾಯಾಧೀಶರು - 105
(ಸೂಪರ್ ಸ್ಕೇಲ್ ಸೇರಿದಂತೆ)

ಸಿವಿಲ್ ನ್ಯಾಯಾಧೀಶರು - 152
(ಹಿರಿಯ ವಿಭಾಗ)

ಸಿವಿಲ್ ನ್ಯಾಯಾಧೀಶರು - 295
(ಕಿರಿಯ ವಿಭಾಗ)

ಈ) ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

Sl. No.	Name of the Districts	Pendency in District Judge's Courts			Pendency in Courts of Civil Judges (Sr. Dn.)			Pendency in courts of Civil Judges (Jr. Dn.)		
		Civil	Criminal	Total	Civil	Criminal	Total	Civil	Criminal	Total
1	2	3	4	5	6	7	8	9	10	11
1.	Bangalore City	83673	5392	89065	30378	55121	85499	-	232936	232936
2.	Bangalore Rural	2670	1371	4041	12014	1795	13809	20315	16338	36653
3.	Belgaum	4728	2912	7640	21143	473	21616	19279	10135	29414
4.	Bellary	2974	1096	4070	7228	418	7646	10928	4133	15061
5.	Bidar	618	854	1472	6366	251	6617	5714	4919	10633
6.	Bijapur	1627	1334	2961	15863	1280	17143	11799	8917	20716
7.	Chikmagalur	2148	942	3090	3719	669	4388	8968	11423	20391
8.	Chitradurga	3191	1211	4402	16010	215	16225	16294	11020	27314
9.	D.K. Mangalore	3174	1528	4702	16963	1168	18131	18344	40254	58598
10.	Dharwad	3242	1247	4489	17723	2584	20307	24036	16430	40466
11.	Gulbarga	1324	1431	2755	14790	320	15110	9427	11974	21401
12.	Hassan	2013	1143	3156	14182	418	14600	11874	12485	24359
13.	Kodagu	129	414	543	1929	353	2282	2666	7511	10177
14.	Kolar	1763	2147	3910	11909	3339	15248	21352	9014	30366
15.	Mandya	2463	972	3435	12731	916	13647	11242	13647	24889

1	2	3	4	5	6	7	8	9	10	11
16.	Mysore	5949	2325	8274	23267	7500	30767	16538	17987	34525
17.	Raichur	596	713	1309	5125	314	5439	5977	7983	13960
18.	Shimoga	822	1424	2246	14649	9152	23801	20986	22238	43224
19.	Tumkur	3014	2099	5113	16410	1792	18202	21154	11181	32335
20.	U.K. Karwar	543	424	967	8148	382	8530	6304	8209	14513
	Total	**126661**	**30979**	**157640**	**270547**	**88460**	**359007**	**263197**	**478734**	**741931**